**<u>ಅಪರ ಹಿರಿಯ ಸಿವಿಲ್ ನ್ಯಾಯಾಲಯ, ಶ್ರೀರಂಗಪಟ್ಟಣ.</u>**

**<u>ಅಸಲು ದಾವಾ ಸಂಖ್ಯೆ : 80/2023</u>**

**ಡಿ.ಡಬ್ಲ್ಯೂ-7**

| | |
|---|---|
| **ಹೆಸರುಃ** | ರೂಪೇಶ್ ಕುಮಾರ್ |
| **ತಂದೆಯ ಹೆಸರುಃ** | ಲೇಟ್ ಎಂ.ಟಿ.ತಮ್ಮೇಗೌಡ |
| **ವಯಸ್ಸುಃ** | 49 ವರ್ಷ |
| **ವೃತ್ತಿಃ** | ಸರ್ವೆಯರ್, ಶ್ರೀರಂಗಪಟ್ಟಣ. |
| **ವಾಸಃ** | ಪಾಂಡವಪುರ ಟೌನ್. |

ದಿನಾಂಕ **15.01.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆ : ಪ್ರತಿವಾದಿ ಪರ ಶ್ರೀ. ಎನ್.ಕೆ.ಎಸ್. ವಕೀಲರಿಂದ :</u>**

ಈ ಪ್ರಕರಣದಲ್ಲಿ ನ್ಯಾಯಾಲಯದಿಂದ ಸಾಕ್ಷಿ ನುಡಿಯಲು ಸಮನ್ಸ್ ಬಂದ ಪ್ರಯುಕ್ತ ನಾನು ನ್ಯಾಯಾಲಯಕ್ಕೆ ಹಾಜರಾಗಿರುತ್ತೇನೆ. ಬೋಂತಗಳ್ಳಿ ಗ್ರಾಮದ ಸರ್ವೆ ನಂಬರ್ 13 ನ್ನು ದಿನಾಂಕಃ 16.11.2006 ರಂದು ನಾನು ಅಳತೆ ಮಾಡಿ ಸ್ಕೆಚ್ ಮಾಡಿರುತ್ತೇನೆ. ಸದರಿ ಸ್ಕೆಚನ್ನು ರಿಜಿಸ್ಟರ್ ಮಾಡಿಸುವ ಉದ್ದೇಶಕ್ಕಾಗಿ ಮಾಡಿಕೊಟ್ಟಿರುತ್ತೇನೆ. ಸದರಿ ಸ್ಕೆಚ್ ಪ್ರಕಾರ ಚಿಕ್ಕತಾಯಮ್ಮರವರ ಹೆಸರಿಗೆ 0.02 ಗುಂಟೆ, ರವಿಕುಮಾರ್ ರವರ ಹೆಸರಿಗೆ 1 ½ ಗುಂಟೆ ಮಾಡಿರುತ್ತೇವೆ. ಸದರಿ ಸ್ಕೆಚ್‌ನ ಕಛೇರಿ ಸಂಖ್ಯೆ 677/2006-07 ಎಂದು ಇರುತ್ತದೆ. ಸದರಿ ಸರ್ವೆ ನಂಬರ್ 13 ರಲ್ಲಿ ವಿಸ್ತೀರ್ಣ 2 ಎಕರೆ 2 ಗುಂಟೆ ಇರುತ್ತದೆ. ಸ್ಥಳಕ್ಕೆ ಸ್ಕೆಚ್ ಮಾಡಲು ಹೋದಾಗ ವಾದಿ ಮತ್ತು ಪ್ರತಿವಾದಿ ಸಹಿ ಮಾಡಿರುತ್ತಾರೆ. ಸದರಿ ಸ್ಕೆಚ್‌ಗೆ ನಮ್ಮ ಮೇಲಾಧಿಕಾರಿಗಳು ಸಹಿ ಮಾಡಿರುತ್ತಾರೆ.

**<u>ಪಾಟೀ ಸವಾಲು : ವಾದಿಯ ಪರ ಶ್ರೀ. ಎಸ್.ಕೆ. ವಕೀಲರಿಂದ :</u>**

ನಾನು 2004 ರಿಂದ 2013 ರವರೆಗೆ ಲೈಸನ್ಸ್ ಸರ್ವೆಯರ್ ಆಗಿ ಕೆಲಸ

ಮಾಡಿರುತ್ತೇನೆ. ಯಾರಾದರೂ ಸ್ಕೆಚ್ ಮಾಡಲು ಅರ್ಜಿಯನ್ನು ತಾಲ್ಲೂಕು ಕಛೇರಿಗೆ ಸಲ್ಲಿಸಿದರೆ ಅದನ್ನು ನಮಗೆ ಕಳುಹಿಸಿಕೊಡುತ್ತಾರೆಂದರೆ ಸರಿ. ಆ ಬಗ್ಗೆ ನಾವು ಕಡತ ನಿರ್ವಹಣೆ ಮಾಡುತ್ತೇವೆ. ಸದರಿ ಕಡತವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇದೆಯೇ ಎಂದರೆ ಸಾಕ್ಷಿಯು 2011 ರಿಂದ ಇಚೀನ ದಾಖಲೆಗಳು ಇರುತ್ತವೆ, ಅದಕ್ಕಿಂತ ಮುಂಚಿನ ದಾಖಲೆಗಳನ್ನು ವಿಲೇವಾರಿ ಮಾಡಿರುತ್ತಾರೆಂದು ನುಡಿದಿರುತ್ತಾರೆ. ಸಾಮಾನ್ಯವಾಗಿ ಮಾರುವವರು ಮತ್ತು ಕೊಳ್ಳುವವರು ಸ್ಥಳದಲ್ಲಿರಬೇಕು, RTC ಇರಬೇಕು, ಆಗ ಮಾತ್ರ ನಾವು ಅಳತೆ ಮಾಡುತ್ತೇವೆ. ನಾನು ಅಳತೆ ಮಾಡಿದ ವ್ಯಕ್ತಿಗಳ ಎಲ್ಲರ ಹೆಸರನ್ನು ನೆನಪಿಲ್ಲಿಟ್ಟುಕೊಳ್ಳಲು ಆಗುವುದಿಲ್ಲ. ಸದರಿ ಈ ಕೇಸಿನ ಸ್ಕೆಚ್ ಮಾಡುವ ಕಾಲಕ್ಕೆ ಚಿಕ್ಕಣ್ಣ, ಮಹೇಶ ಇನ್ನು ಬೇರೆಯವರು ಇದ್ದರು, ಅವರ ಹೆಸರು ನೆನಪಿಲ್ಲ. ಬಾಯಿಮಾತಿನಲ್ಲಿ ಮಾರುವವರು ಮತ್ತು ಕೊಳ್ಳುವವರು ಎಂದು ಹೇಳಿದ ಮಾತ್ರಕ್ಕೆ ಅವರ ಹೆಸರನ್ನು ನಮೂದು ಮಾಡುವ ಅವಶ್ಯಕತೆ ಇಲ್ಲ ಎಂದರೆ ಸಾಕ್ಷಿಯು ಅದರಲ್ಲಿ ಯಾರಾದರೂ ಒಬ್ಬರು ಇಲ್ಲದೇ ಇದ್ದರೆ ಅರ್ಜಿಯನ್ನು ತಿರಸ್ಕರಿಸುತ್ತೇವೆ ಎಂದು ಹೇಳುತ್ತಾರೆ. ಈ ಕೇಸಿನಲ್ಲಿ ಚಿಕ್ಕತಾಯಮ್ಮ ಮಾರುವವರಾಗಿರುತ್ತಾರೆ, ರವಿಕುಮಾರ್ ರವರು ಖರೀದಿದಾರರಾಗಿರುತ್ತಾರೆ. ಮಹಜರ್ ಮಾಡಿದ ದಾಖಲೆಗಳನ್ನು ಸಾಮಾನ್ಯವಾಗಿ 2011 ರಲ್ಲಿಯೇ ವಿಲೇವಾರಿ ಮಾಡಿರುವುದರಿಂದ ಲಭ್ಯವಿರುವುದಿಲ್ಲ. ಕಡತವನ್ನು ನೋಡದೇ ನಾನು ಈ ದಿನ ಬಂದು ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿದಿರುತ್ತೇನೆ. ನ್ಯಾಯಾಲಯದಲ್ಲಿರುವ ದಾಖಲಾತಿಗಳನ್ನು ಈ ದಿನವೇ ಮೊದಲ ಬಾರಿ ನೋಡಿರುತ್ತೇನೆ.

**2.** ವಾದಿ ಚಿಕ್ಕತಾಯಮ್ಮರವರು ಈಗ ನನಗೆ ಮರೆತುಹೋಗಿರುತ್ತಾರೆ. ನ್ಯಾಯಾಲಯದಲ್ಲಿ ವಾದಿಯು ಇರುತ್ತಾರೋ, ಇಲ್ಲವೋ ನನಗೆ ಗೊತ್ತಿಲ್ಲ, ನ್ಯಾಯಾಲಯದಲ್ಲಿ ನೋಡಿದರೆ ಈಗ ಗುರುತಿಸಲಾಗುವುದಿಲ್ಲ. ನಾನು ನ್ಯಾಯಾಲಯಕ್ಕೆ ಬಂದಾಗ ಪ್ರತಿವಾದಿ ಮಾತನಾಡಿಸಿರುವುದರಿಂದ ನನಗೆ ಗೊತ್ತಾಗಿರುತ್ತದೆ. ವಾದಿಯಿಂದ ಯಾವುದೇ ಅರ್ಜಿ ಬಂದಿಲ್ಲ, ನಾನು ಯಾವುದೇ

ಸ್ಕೆಚ್ ಮತ್ತು ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ. ಸದರಿ ಜಮೀನು 2 ಎಕರೆ 2 ಗುಂಟೆ ಇರುತ್ತದೆ.

**ಮರು ವಿಚಾರಣೆ : ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಈ ದಿನ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇ**

**ಅಪರ ಹಿರಿಯ ಸಿಜೆ, ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**